**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,</u>**
**<u>ನ್ಯಾಯಾಲಯ,ಹೊಸದುರ್ಗ.</u>**

ಅಸಲು ದಾವಾ ಸಂಖ್ಯೆ **133/2023** ದಿನಾಂಕಃ **17 -06-2026**

ಪಿ.ಡಬ್ಲ್ಯೂಃ **2**

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು ಃ ಪ್ರತಿವಾದಿಯ ಪರ ಶ್ರೀ ಎಚ್ .ಎಲ್.ಎನ್  ವಕೀಲರಿಂದ</u>

1. ಈ ದಾವೆಯನ್ನು ರೂಪರವರ ವಿರುದ್ದ ಲತಾ ರವರು ದಾಖಲಿಸಿರುತ್ತಾರೆ. ನಿವೇಶನ ರೂಪಮ್ಮನವರಿಗೆ ಸೇರಿದ್ದು ಅದು ಲತಾ ರವರಿಗೆ ಸೇರಿರುವುದಿಲ್ಲ ಎಂದು ದಾಖಲಿಸಿರುತ್ತಾರೆ. ದಾವಾ ಸ್ವತ್ತಿನ ನಿವೇಶನ ನಂ.72 ಇರುತ್ತದೆ. ಅದರ ಅಸೆಸ್ ಮೆಂಟ್ ನಂಬರ್ ಹೇಳಲು ಬರುವುದಿಲ್ಲ. ಚೆಕ್ಕುಬಂದಿ ಪೂರ್ವ-ರಸ್ತೆ, ಪಶ್ಚಿಮ-ರತ್ನಮ್ಮನವರ ನಿವೇಶನ, ಉತ್ತರ-ರಸ್ತೆ ಮತ್ತು ದಕ್ಷಿಣಕ್ಕೆ ರಂಗಪ್ಪನವರ ಮನೆ. ವಾದಿಗೆ ಸದರಿ ಸ್ವತ್ತು ದಾವಣಗೆರೆಯ ಕೊಳಚೆ ನಿರ್ಮಾಲನ ಮಂಡಳಿಯಿಂದ ಮಂಜೂರಾಗಿರುತ್ತದೆ.

2. ದಾವಾ ಸ್ವತ್ತಿನಲ್ಲಿ ಕಟ್ಟಿರುವ ಮನೆ ಇರುತ್ತದೆ. ವಾದಿ ದಾವಾಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ . ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರೂ ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.